# ನೀಳನಾಯಕನೂ ಎರಡಕ್ಷರದ ಇಂಗ್ಲಿಷ್ ಬೈಗುಳವೂ

ಆ ದಿನ ರಿಂಗಣಿಸಿದ ಫೋನ್ ಕಿವಿಗಿಟ್ಟಾಗ ಕೇಳಿದ್ದು ಜನಪ್ರಿಯ ನಟರೊಬ್ಬರ ಕಂಠ. 'ನಾವು ವರ್ಷಗಟ್ಟಲೆ ಕಷ್ಟಪಟ್ಟು ಸ್ಕ್ರಿಪ್ಟ್ ಮಾಡಿ ಸಿನಿಮಾ ಮಾಡುವಾಗ ಹೀಗೆ ಯಾರೋ ಫ* ಎಂದು ಇಂಗ್ಲಿಷ್ ಮೊಮ್ಮಕ್ಕಳಂತೆ ಏಕಾಏಕಿ ಬೈದರೆ ಹೇಗಾಗಬೇಡ? ನಮಗೂ ನರಗಳಿವೆ. ಕೋಪ ಬರುತ್ತದೆ. ದಿಸ್ ಈಸ್ ದಿ ಲಿಮಿಟ್. ನಾನು ಕೂಡ ಅವರ ಖಾಸಗಿ ವಿಷಯಗಳನ್ನೆಲ್ಲಾ ಬಯಲಿಗೆಳೆದು ಅಷ್ಟು ಸುಲಭವಾಗಿ ಫ* ಎಂದ ನಟಿಯನ್ನು ಕೀಟಲೆ ಮಾಡಿದರೆ ಅವರ ಮನಸ್ಸಿಗೆ ಹೇಗಾಗಬೇಡ?...' ಲಹರಿಯಲ್ಲಿ ಸಿಟ್ಟು ಕಾರಿಕೊಳ್ಳತೊಡಗಿದರು.

ಆರಡಿಗಿಂತ ಎತ್ತರದ ನಾಯಕ. ಅವರ ಸೊಂಟದಷ್ಟೇ ಎತ್ತರಕಾಯದ ನಾಯಕಿ. ಹಾಡೊಂದರ ಚಿತ್ರೀಕರಣದಲ್ಲಿ ತನ್ನ ಕೂದಲು ತುಸು ಕೊಂಕಿದೆ ಎಂದು ಆ ನಾಯಕಿ ಇಂಗ್ಲಿಷ್‌ನ ಅಶ್ಲೀಲ ಪದ ಪ್ರಯೋಗಿಸಿ ನಿಂದಿಸಿದ್ದು. ನಾಯಕನ ಕೋಪದ ಮೂಲ ಅದೇ.

ಕೆಲವು ವರ್ಷಗಳ ಹಿಂದಿನ ಮಾತು. ಇದೇ ನೀಳ ನಾಯಕ. ಕಂಠೀರವ ಸ್ಟುಡಿಯೋ ಗೇಟಿನ ಮುಂದೆ ದಶಕಗಟ್ಟಲೆ ಅನುಭವವಿರುವ ಛಾಯಾಗ್ರಾಹಕರೊಬ್ಬರಿಗೆ ಕಾಯಲು ಹೇಳಿದರು. ಐಷಾರಾಮಿ ಕಾರೊಂದರ ಟೆಸ್ಟ್ ಡ್ರೈವ್‌ಗೆ ಹೊರಟ ಅವರು ಕೆಲವೇ ನಿಮಿಷಗಳಲ್ಲಿ ವಾಪಸ್ ಬರುವುದಾಗಿ ಭರವಸೆ ಕೊಟ್ಟರು. ಛಾಯಾಗ್ರಾಹಕ ಗಡಿಯಾರ ನೋಡಿಕೊಳ್ಳತೊಡಗಿದರು. ಅರ್ಧ ತಾಸಾದ ಮೇಲೆ ಟೆಸ್ಟ್ ಡ್ರೈವ್‌ಗೆ ಹೋಗಿದ್ದ ಕಾರು ಮರಳಿತು. ಛಾಯಾಗ್ರಾಹಕ ಕಾರಿನ ಬಳಿಗೆ ಹೋದರೂ ಅದು ನಿಲ್ಲದೆ ಮುಂದೆ ನುಗ್ಗಿತು. ಸಿಟ್ಟಿನ ವಿಷಯದಲ್ಲಿ ಆ ಛಾಯಾಗ್ರಾಹಕರೂ ದೂರ್ವಾಸರೇ. ಕಂಠೀರವ ಸ್ಟುಡಿಯೋ ಆವರಣದ ಕೋಣೆಯೊಂದರಲ್ಲಿ ಕೋಟಿ ನಿರ್ಮಾಪಕರೊಬ್ಬರ ಜೊತೆ ಆ ನಾಯಕ ಚರ್ಚೆಗೆ ಕೂತಿದ್ದರು. ಅಲ್ಲಿಗೇ ಧಾವಿಸಿ, ಕೋಣೆಯ ಕದ ನೂಕಿ, 'ನನಗೆ ಅಲ್ಲಿ ಕಾಯುವಂತೆ ಹೇಳಿ ಕಾರನ್ನೂ ನಿಲ್ಲಿಸದೆ ಬಂದೆಯಲ್ಲಾ ಇದು ಸರಿಯಾ?' ಎಂದು ಛಾಯಾಗ್ರಾಹಕರು ಅರ್ಥಪೂರ್ಣ ಪ್ರಶ್ನೆಯನ್ನು ಅಧಿಕಾರಯುತವಾಗಿಯೇ ಕೇಳಿದರು (ಏಕವಚನದಲ್ಲಿ ಮಾತನಾಡಿಸುವಷ್ಟು ಸಲಿಗೆ ಆ ಛಾಯಾಗ್ರಾಹಕರಿಗೆ ಇತ್ತು. ವಯಸ್ಸಿನಲ್ಲಿ ಅವರು ದೊಡ್ಡವರೂ ಹೌದು). ಆಗ ನಾಯಕ ಒಂದಿಷ್ಟು ಕನ್ನಡದ ನಿಂದನಾ ಪದಗಳನ್ನು ಪ್ರಯೋಗಿಸಿ ಇಂಗ್ಲಿಷ್‌ನ 'ಫ*' ಪದವನ್ನೂ ಸೇರಿಸಿಬಿಟ್ಟರು. ಛಾಯಾಗ್ರಾಹಕರು ನೊಂದುಕೊಂಡರು.

ಮೊನ್ನೆಮೊನ್ನೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ನಡೆಯುತ್ತಿತ್ತು. ಸಿನಿಮಾ ಮಂದಿಯ ಆಟ ಅದು. ಜಯಲಕ್ಷ್ಮಿ ಚಂಚಲೆಯಾಗಿದ್ದಳು. ಇದೇ ನಾಯಕನಿಗೆ ಪಂದ್ಯ ಕೈಬಿಟ್ಟು ಹೋದೀತೆಂಬ ಆತಂಕ. ಬ್ಯಾಟ್ಸ್‌ಮನ್ ಬ್ಯಾಟ್‌ನ ಅಂಚಿಗೆ ಬಡಿದ ಚೆಂಡು ಎತ್ತರ ಚಿಮ್ಮಿತು. ವಿಕೆಟ್ ಕೀಪಿಂಗ್ ಮಾಡುತ್ತಿದ್ದ ನಾಯಕನ ಹಿಡಿತಕ್ಕೆ ಅದು ಸಿಗಲೇಇಲ್ಲ. ತಕ್ಷಣಕ್ಕೆ ಬಾಯಿಂದ ಹೊರಟ ಉದ್ಗಾರ– ಇಂಗ್ಲಿಷ್‌ನ ಅದೇ 'ಫ*'.

ಹಾಗೆ ನೋಡಿದರೆ ಆ ದಿನ ಒಂದು ಲಹರಿಯಲ್ಲಿ ತರಾಟೆಗೆ ತೆಗೆದುಕೊಂಡ ನಾಯಕಿಗೆ ಕೆಲವು ಚಿತ್ರಗಳಲ್ಲಿ ಅವಕಾಶ ಕೊಡಿಸಿದ್ದು ಇದೇ ನಾಯಕ. ಆಟದ ಹುಚ್ಚಿನಿಂದ ಹಚ್ಚಿಕೊಂಡ ಒಬ್ಬ ನಿರ್ದೇಶಕರ ಗೆಳೆತನವನ್ನು ಇದ್ದಕ್ಕಿದ್ದಂತೆ ಕಡಿದುಕೊಂಡದ್ದೂ ಇದೇ ನಾಯಕ. ಇನ್ನೊಬ್ಬ ಜನಪ್ರಿಯ ನಾಯಕನ ಅಭಿಮಾನಿಗಳು ಕ್ರಿಕೆಟ್ ಆಟವೊಂದರ ವೇಳೆ ಕಿಚಾಯಿಸಿದಾಗ ಕಿಚ್ಚು ಹತ್ತಿಸಿಕೊಂಡದ್ದೂ ಇದೇ ನಾಯಕ. ಈಗ ನಾಯಕ ಇನ್ನೊಬ್ಬ ನೀಳನಾಯಕಿಯನ್ನು ಬೆಳೆಸಿದ್ದಾಗಿದೆ. ಆ ನಾಯಕಿಗೆ ಸಿಟ್ಟು ಬಂದಾಗ ಹುಟ್ಟುವ ಪದವೂ ಇಂಗ್ಲಿಷ್‌ನ 'ಫ*'!

**–ಎನ್ವಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68